**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀನಿವಾಸಪುರ**

**ಸಿಸಿ ಸಂಖ್ಯೆ430/2026** **CW**-1 **PW**-1

**ಸಾಕ್ಷಿಯನ್ನು ದಿಃ03.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶ್ರಾವಣಿ |
| ಗಂಡನ ಹೆಸರುಃ | ನವೀನ್ ಕುಮಾರ್ |
| ವಯಸ್ಸುಃ | 24 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ದೊಡಮಲದೊಡ್ಡಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ16.03.2026 ರಂದು ಸಂಜೆ 6.30ರ ಸಮಯದಲ್ಲಿ ನಮ್ಮ ಜಮೀನಿನಿಂದ ಹುಲ್ಲನ್ನು ತೆಗೆದುಕೊಂಡು ಗ್ರಾಮದ ಕಡೆಗೆ ಹೋಗುತ್ತಿರುವಾಗ ಎದುರಿನಿಂದ ಒಬ್ಬ ಹುಡುಗನು ನಡೆದುಕೊಂಡು ಬಂದು ನನ್ನ ಮುಂದೆ ಹೋಗಿದ್ದ. ಕೆಲವು ನಿಮಿಷಗಳ ನಂತರ ಹಿಂದಿನಿಂದ ಆ ಹುಡುಗನು ಮತ್ತೆ ಬಂದು ನನ್ನ ಕುತ್ತಿಗೆಯಲ್ಲಿದ್ದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಓಡಿಹೋಗುತ್ತಿದ್ದ. ನಾನು ಆತನನ್ನು ಹೊಲದಲ್ಲಿ ಹಿಂಬಾಲಿಸಿದ್ದೆ, ಆದರೆ ಆ ಹುಡುಗನು ವೇಗವಾಗಿ ಓಡಿ ಹೋಗಿದ್ದ. ನಾನು ಆ ಹುಡುಗನ ಮೇಲೆ ನನ್ನ ಕೈಯಲ್ಲಿದ್ದ ಹುಲ್ಲು ವರೆಯ ವರಭಾರೆಯನ್ನು ಬೀಸಿದ್ದೆ, ಆದರೆ ಆತನು ತನ್ನ ಶೂಗಳನ್ನು ಆತುರದಲ್ಲಿ ಅಲ್ಲಿಯೇ ಬಿಟ್ಟು ಪರಾಗಿಯಾದ. ನಾನು ಅದೇ ದಿನ ರಾತ್ರಿ 10 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ. (ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.)

ದಿಃ18.03.2026 ರಂದು ಪೊಲೀಸರಿಗೆ ನಾನು ಕಳ್ಳತನ ನಡೆದ ಸ್ಥಳವನ್ನು ತೋರಿಸಿದ್ದೆ. ಸದರಿ ಸ್ಥಳದಲ್ಲಿ ಪೊಲೀಸರು ಚಾಸಾ-2 ಮತ್ತು 3ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 2.15ರ ಸಮಯದಲ್ಲಿ ಪಂಚನಾಮೆ ಬರೆದು, ಕಳ್ಳತನ ಮಾಡಿ ಓಡಿ ಹೋದ ವ್ಯಕ್ತಿಯ ಶೂಗಳನ್ನು ಮತ್ತು ಘಟನೆಯ ದಿನ ನಾನು ನನ್ನ ಬಳಿ ಇದ್ದ ಹುಲ್ಲು ವರೆಯು ವರಭಾರೆಯನ್ನು ವಶಪಡಿಸಿಕೊಂಡಿದ್ದರು. ಈಗ ನೋಡುತ್ತಿರುವ ಮತ್ತು ಈಗ ಗುರ್ತಿಸಿದ ಎಂಒ-1 ಮತ್ತು 2 ಶೂಗಳು ಮತ್ತು ಎಂಒ-3 ವರಭಾರೆಯಾಗಿರುತ್ತವೆ. ಆ ಸಮಯದಲ್ಲಿ ಈಗ ನೋಡುತ್ತಿರುವ ಈಗ ಗುರ್ತಿಸಿದ ನಿಪಿ-2 ರಂತೆ

ಪಂಚನಾಮೆ ಬರೆದು ಪೊಲೀಸರು ನನ್ನ ಸಹಿ ಪಡೆದಿದ್ದರು. (ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಈಗ ನೋಡುತ್ತಿರುವ ಈಗ ಗುರ್ತಿಸಿದ ನಿಪಿ-3 ಭಾವಚಿತ್ರವನ್ನು ತೆಗೆದಿದ್ದರು.

ದಿಃ05.05.2026 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಈಗಾಗಲೇ ಅವರು ವಶಪಡಿಸಿಕೊಂಡಿರುವ ಬಂಗಾರದ ಆಭರಣವನ್ನು ತೋರಿಸಿದ್ದು ನಾನು ಅದರಲ್ಲಿ ನನ್ನ ಬಂಗಾರದ ಮಾಂಗಲ್ಯ ಸರ ಮತ್ತು ಅದರೊಂದಿಗೆ ಇದ್ದ ತಾಳಿ ಮತ್ತು ಕಾಸನ್ನು ಗುರ್ತಿಸಿದ್ದೆ. ಪೊಲೀಸರು ಅದನ್ನು ತೂಕ ಮಾಡಿದ್ದು ಅದರ ತೂಕ ಅಂದಾಜು 36 ಗ್ರಾಂಗಳಾಗಿತ್ತು. ಪೊಲೀಸರು ಠಾಣೆಯಲ್ಲಿ ನನ್ನಿಂದ ಸರಗಳ್ಳತನ ಮಾಡಿದ್ದ ವ್ಯಕ್ತಿಯನ್ನು ಹಿಡಿದಿದ್ದು ಆತನನ್ನು ನೋಡಿ ನಾನು ಠಾಣೆಯಲ್ಲಿ ಗುರ್ತಿಸಿದ್ದೆ. ಈ ದಿನ ವಿಸಿ ಮೂಲಕ ನೋಡುತ್ತಿರುವ ಆರೋಪಿಯೇ ನನ್ನ ಕುತ್ತಿಗೆಯಿಂದ ಮಾಂಗಲ್ಯ ಸರ ಕಿತ್ತುಕೊಂಡ ಹೋಗಿದ್ದ ವ್ಯಕ್ತಿ. ನ್ಯಾಯಾಲಯದಿಂದ ನಾನು ಆದೇಶ ಪಡೆದು ನನ್ನ ಸರ ಮತ್ತು ಅದರೊಂದಿಗೆ ಆಭರಣಗಳನ್ನು ಬಿಡಿಸಿಕೊಂಡಿದ್ದೇನೆ. ಆ ಸಮಯದಲ್ಲಿ ಪೊಲೀಸರು ಈಗ ನೋಡುತ್ತಿರುವ ಈಗ ಗುರ್ತಿಸಿದ ನಿಪಿ-4 ಭಾವಚಿತ್ರವನ್ನು ತೆಗೆದಿದ್ದರು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿಯವರೆಗೆ ವ್ಯಾಸಂಗ ಮಾಡಿದ್ದೇನೆ. ದೂರನ್ನು ಪೊಲೀಸರೇ ಬರೆದಿರುತ್ತಾರೆ. ನಮ್ಮ ಊರಿನಿಂದ ಶ್ರೀನಿವಾಸಪುರ 7 ಕಿ.ಮೀ ದೂರದಲ್ಲಿದೆ. ಠಾಣೆಗೆ ರಾತ್ರಿ 10 ಗಂಟೆಗೆ ಹೋಗಿದ್ದೆ. ನಮ್ಮ ಗ್ರಾಮದಿಂದ ರಾತ್ರಿ 9.45 ರ ಸಮಯದಲ್ಲಿ ಬಿಟ್ಟು ಹೋಗಿದ್ದೆವು. ನನ್ನೊಂದಿಗೆ ಹರೀಶ್, ವೆಂಕಟೇಶ್, ವೆಂಕಟೇಶರೆಡ್ಡಿ, ನವೀನ್ ಹಾಗೂ ರಾಘವೇಂದ್ರ ಇವರುಗಳು ಇದ್ದರು. ನಿಪಿ-1 ನ್ನು ನಾನು ಓದಲಿಲ್ಲ. ನಿಪಿ-1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಮಹಜರಿನಲ್ಲಿ ಏನು ಬರೆಯಲಾಗಿದೆ ಮತ್ತು ಯಾರು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದಕ್ಕೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನಿಂದ ಯಾವುದೇ ಹೇಳಿಕೆ ಪಡೆದಿಲ್ಲ. ದೂರಿನಲ್ಲಿ ನನ್ನ ಕಳುವಾಗಿರುವ ಸರದ ತೂಕ 36 ಗ್ರಾಂ ಎಂದು ತಿಳಿಸಿದ್ದೆ.

ನನ್ನ ಬಂಗಾರ ಸರವನ್ನು ಖರೀದಿಸಿರುವ ಬಿಲ್ಲುಗಳನ್ನು ಪೊಲೀಸರಿಗೆ ನಾನು ನೀಡಿದ್ದೆ. ಆರೋಪಿ ನನ್ನಿಂದ ಯಾವುದೇ ಚೈನನ್ನು ಕಿತ್ತುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಪಂಚನಾಮೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 3 ಸಾಮಾನ್ಯವಾಗಿ ದೊರೆಯುವಂತಹ ವಸ್ತುಗಳಾಗಿದ್ದು ಅದು ಪ್ರಕರಣಕ್ಕೆ ಸಂಬಂಧಿಸಿಲ್ಲದಿದ್ದರೂ ಪೊಲೀಸರ ಮಾತು ಕೇಳಿ ಈ ದಿನ ಗುರ್ತಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಸುಳ್ಳು ದೂರನ್ನು ನೀಡಿ, ಆರೋಪಿಯ ವಿರುದ್ಧ ಈ ದಿನ ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀನಿವಾಸಪುರ**

**ಸಿಸಿ ಸಂಖ್ಯೆ:430/2026** **CW**-7 **PW**-2

**ಸಾಕ್ಷಿಯನ್ನು ದಿಃ03.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಮುನಿಸ್ವಾಮಿ ಚಾರಿ |
| ತಂದೆ ಹೆಸರುಃ | ಶಂಕರಾಚಾರಿ |
| ವಯಸ್ಸುಃ | 40 ವರ್ಷ |
| ವೃತ್ತಿಃ | ಅಕ್ಕಸಾಲಿಗ |
| ವಾಸ ಸ್ಥಳಃ | ಶ್ರೀನಿವಾಸಪುರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಶ್ರೀನಿವಾಸಪುರದಲ್ಲಿ ಲಕ್ಷ್ಮೀ ಗೋಲ್ಡ್ ಕವರಿಂಗ್ ಎಂಬ ಹೆಸರಿನಲ್ಲಿ ಬಂಗಾರದ ಆಭರಣಗಳನ್ನು ಪಾಲಿಶ್ ಮತ್ತು ರಿಪೇರಿ ಮಾಡುವ ಕೆಲಸ ಮಾಡುತ್ತೇನೆ.

ದಿಃ17.03.2026 ರಂದು ಈಗ ವಿಸಿ ಮೂಲಕ ನೋಡುತ್ತಿರುವ ಆರೋಪಿ ಪ್ರೇಮಕುಮಾರ್ ನನ್ನ ಅಂಗಡಿಗೆ ಬಂದು ಒಂದು ಬಂಗಾರದ ಸರ ನೀಡಿ ಆತನಿಗೆ ಹಣ ಬೇಕಾಗಿದೆ ಎಂದು ಹೇಳಿ ಕೇಳಿಕೊಂಡಿದ್ದ. ನಾನು ಆ ಬಂಗಾರದ ಸರವನ್ನು ಅಡವಿಟ್ಟು ಆರೋಪಿಗೆ 50 ಸಾವಿರ ರೂ ಸಾಲ ನೀಡಿದ್ದೆ. ತದನಂತರ ದಿಃ08.04.2026 ರಂದು ಪೊಲೀಸರು ಆರೋಪಿಯನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದು ಈಗಾಗಲೇ ಆರೋಪಿ ನನಗೆ ನೀಡಿದ್ದ ಬಂಗಾರದ ಸರವನ್ನು ಹಾಜರುಪಡಿಸಲು ಹೇಳಿದರು. ನಾನು ಆರೋಪಿ ಅಡವಿಟ್ಟಿದ್ದ ಬಂಗಾರದ ಸರವನ್ನು ಪೊಲೀಸರ ಸಮಕ್ಷಮ ಠಾಣೆಯಲ್ಲಿ ಹಾಜರುಪಡಿಸಿದ್ದೆ. ಪೊಲೀಸರು ಆ ಸರವು ಕಳುವಾದ ವಸ್ತು ಎಂದು ಹೇಳಿ ಅದನ್ನು ಗಣೇಶ್, ಹರೀಶ್‌ರವರ ಸಮಕ್ಷಮ ಪಂಚನಾಮೆ ಬರೆದು ವಶಪಡಿಸಿಕೊಂಡಿದ್ದರು. ಈಗ ನೋಡುತ್ತಿರುವ ಈಗ ಗುರ್ತಿಸಿದ ನಿಪಿ-5 ಸದರಿ ಪಂಚನಾಮೆಯಾಗಿದ್ದು ಅದರಲ್ಲಿ ನನ್ನ ಸಹಿ ಇದೆ. (ನಿಪಿ-5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರ್ತಿಸಲಾಯಿತು.) ಆ ಸಮಯದಲ್ಲಿ ಈಗ ನೋಡುತ್ತಿರುವ ಈಗ ಗುರ್ತಿಸಿದ ನಿಪಿ-6 ರಂತೆ ಭಾವಚಿತ್ರ ತೆಗೆದಿದ್ದರು. ಸದರಿ ಬಂಗಾರದ ಸರವು ಅಂದಾಜು 36 ಗ್ರಾಂ ತೂಕವಿತ್ತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>**

ಪೊಲೀಸರು ನನಗೆ ಲಿಖಿತ ನೋಟೀಸು ನೀಡಿರಲಿಲ್ಲ. ನಿಪಿ-5 ನ್ನು ಬರೆದಿರುವ ಪೊಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ನಿಪಿ-5 ಕ್ಕೆ ನಾವು ಮೂರು ಜನ ಸಹಿ ಮಾಡಿದ್ದು ಬೇರೆ ಯಾರು ಸಹಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾರಾದರೂ ಬಂಗಾರದ ಆಭರಣವನ್ನು ಅಥವಾ ಅಡವು ಇಟ್ಟಲ್ಲಿ ಅವರಿಗೆ ರಸೀದಿ ನೀಡಬೇಕು ಎಂದರೆ ಸರಿ. ರಸೀದಿಯಲ್ಲಿ ಅಭಾರದ ತೂಕ ಮತ್ತು ಬೆಲೆ ಬರೆಯಬೇಕಾಗುತ್ತದೆ ಎಂದರೆ ಸರಿ. ನಾನು ಆ ರೀತಿ ಯಾವುದೇ ರಸೀದಿ ನೀಡಿರಲಿಲ್ಲ. ನನ್ನ ಅಂಗಡಿಯಲ್ಲಿ ಸಿಸಿ ಟಿವಿ ಕ್ಯಾಮೆರಾ ಇರುವುದಿಲ್ಲ. ನನ್ನ ಅಂಗಡಿಯಲ್ಲಿ ನಾನು ಈ ರೀತಿ ಅಡವಿಟ್ಟಿರುವ ಬಗ್ಗೆ ಯಾವುದೇ ಪುಸ್ತಕವನ್ನು ಇಟ್ಟಿಲ್ಲ. ಆರೋಪಿ ನನಗೆ ಪ್ರಸ್ತುತ ಬಂಗಾರದ ಸರವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಯಾರಿಂದಲೋ ಪಡೆದುಕೊಂಡಿರುವ ಸರವನ್ನು ಆರೋಪಿಯಿಂದ ಪಡೆದುಕೊಂಡಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**